## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (1584) 1392 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತೆ ದಿ|| ಸಾಲುಮರದ ತಿಮ್ಮಕ್ಕ, 'ಪದ್ಮವಿಭೂಷಣ' ಪ್ರಶಸ್ತಿ ಪುರಸ್ಕೃತ ಕಾದಂಬರಿಕಾರ ದಿ|| ಎಸ್.ಎಲ್.ಭೈರಪ್ಪ, ಚಲನಚಿತ್ರ ನಟ ದಿ||ಅಂಬರೀಷ್, ದಿ||ಎಸ್. ಎಂ. ಕೃಷ್ಣ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಚಲನಚಿತ್ರ ನಟ ದಿವಂಗತ ಅಂಬರೀಷ್ ಮತ್ತು ಮಾಜಿ ಮುಖ್ಯಮಂತ್ರಿಯವರಾದ ದಿವಂಗತ ಎಸ್.ಎಂ.ಕೃಷ್ಣರವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವಂತೆ ಸ್ವೀಕೃತವಾಗಿರುವ ಮನವಿಗಳನ್ನು ಪರಿಶೀಲಿಸಲಾಗುತ್ತಿದೆ.<br><br>ಮುಂದುವರೆದು, 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತರಾದ ದಿವಂಗತ ಸಾಲುಮರದ ತಿಮ್ಮಕ್ಕ ಹಾಗೂ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಕಾದಂಬರಿಕಾರ ದಿವಂಗತ ಎಸ್.ಎಲ್.ಭೈರಪ್ಪರವರಿಗೆ ಮರಣೋತ್ತರ ವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವ ಕುರಿತಂತೆ ಸರ್ಕಾರದ ಮುಂದೆ ಪ್ರಸ್ತಾವನೆಗಳು ಇರುವುದಿಲ್ಲ. |
| ಆ) | ಅಲ್ಲದೆ, ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ-ತಂತ್ರಜ್ಞಾನ ಸೇರಿದಂತೆ ನಾನಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಸಾಧಕರಿಗೆ 2025-26ನೇ ಸಾಲಿನಲ್ಲಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಲು ಸರ್ಕಾರ ಉದ್ದೇಶಿಸಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 327 ಕಸಧ 2025, ದಿನಾಂಕ:12.09.2025ರಲ್ಲಿ, ಖ್ಯಾತ ಚಲನಚಿತ್ರ ತಾರೆಯಾದ ದಿವಂಗತ ಡಾ.ವಿಷ್ಣುವರ್ಧನ್ ಮತ್ತು ದಿವಂಗತ ಡಾ. ಬಿ. ಸರೋಜಾದೇವಿ ಇವರಿಗೆ ಮರಣೋತ್ತರವಾಗಿ 2025-26ನೇ ಸಾಲಿನ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. |
| ಇ) | ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿಗೆ ಭಾಜನರಾಗಿರುವ ಬಿ. ಸರೋಜಾದೇವಿ ಅವರ ಹೆಸರಿನಲ್ಲಿ 'ಚಲನಚಿತ್ರ ವಾರ್ಷಿಕ ಪ್ರಶಸ್ತಿ ಹಾಗೂ ಅಭಿನಯ ತರಬೇತಿ ಕೇಂದ್ರ' ಆರಂಭಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವೇನು; | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ದಿವಂಗತ ಡಾ.ಬಿ.ಸರೋಜಾದೇವಿ ಅವರ ಹೆಸರಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕೆಸಿಐ-ಪಿಐಪಿ/196/2025, ದಿನಾಂಕ:16.09.2025ರನ್ವಯ, ಕನ್ನಡ ಚಿತ್ರರಂಗಕ್ಕೆ ಕನಿಷ್ಠ 25 ವರ್ಷಗಳ ಅವಿಸ್ಮರಣೆಯ ಸೇವೆ ಸಲ್ಲಿಸಿರುವ ಮಹಿಳಾ ಸಾಧಕಿಯರಿಗೆ ಅಭಿನಯ ಸರಸ್ವತಿ ಬಿ. ಸರೋಜಾದೇವಿ ಪ್ರಶಸ್ತಿಯನ್ನು 2025ರ ಕ್ಯಾಲೆಂಡರ್ ವರ್ಷದಿಂದ ಜಾರಿಗೆ ಬರುವಂತೆ ಸ್ಥಾಪಿಸಲಾಗಿರುತ್ತದೆ.<br><br>ಆದರೆ, ಡಾ.ಬಿ.ಸರೋಜಾದೇವಿ ಇವರ ಹೆಸರಿನಲ್ಲಿ ಅಭಿನಯ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಕುರಿತಂತೆ ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಈ) | ರಾಜ್ಯದಲ್ಲಿ ಇದುವರೆವಿಗೂ 'ಕರ್ನಾಟಕ ರತ್ನ' ಪ್ರಶಸ್ತಿಗೆ ಭಾಜನರಾದವರು ಯಾರು ಯಾರು? (ಹೆಸರು, ಕ್ಷೇತ್ರ, ವರ್ಷ ಸೇರಿದಂತೆ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಇದುವರೆಗೆ 'ಕರ್ನಾಟಕ ರತ್ನ' ಪ್ರಶಸ್ತಿಗೆ ಭಾಜನರಾಗಿರುವ ಗಣ್ಯರ ವಿವರವನ್ನು **ಅನುಬಂಧ** ದಲ್ಲಿರಿಸಿದೆ. |

ಸಂಖ್ಯೆ: ಕಸಂವಾ 119 ಕವಿಸ 2025

(**ಶಿವರಾಜ ಎಸ್. ತಂಗಡಗಿ**)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ - 01

## ಕರ್ನಾಟಕ ರತ್ನ ಪ್ರಶಸ್ತಿ ಪಡೆದಿರುವ ಗಣ್ಯರ ಪಟ್ಟಿ

| ಕ್ರಸಂ | ಪ್ರಶಸ್ತಿ ಗಣ್ಯರ ಹೆಸರು | ಕ್ಷೇತ್ರ | ವರ್ಷ |
|---|---|---|---|
| 1 | ರಾಷ್ಟ್ರಕವಿ ಕುವೆಂಪು | ಸಾಹಿತ್ಯ | 1992 |
| 2 | ಡಾ. ರಾಜ್‌ಕುಮಾರ್ | ಚಲನಚಿತ್ರ | 1992 |
| 3 | ಶ್ರೀ ಎಸ್ ನಿಜಲಿಂಗಪ್ಪ | ರಾಜಕೀಯ | 1999 |
| 4 | ಪ್ರೊ. ಸಿ.ಎನ್.ಆರ್. ರಾವ್ | ವಿಜ್ಞಾನ | 2000 |
| 5 | ಪಂ. ಭೀಮಸೇನ್ ಜೋಶಿ | ಸಂಗೀತ | 2004 |
| 6 | ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ್ ಸ್ವಾಮೀಜಿಗಳು | ಸಮಾಜಸೇವೆ | 2006 |
| 7 | ಡಾ. ದೇ. ಜವರೇಗೌಡ | ಸಾಹಿತ್ಯ | 2008 |
| 8 | ಡಾ. ಡಿ. ವೀರೇಂದ್ರ ಹೆಗ್ಗಡೆ | ಸಮಾಜ ಸೇವೆ, ಗ್ರಾಮೀಣ ಅಭಿವೃದ್ಧಿ | 2009 |
| 9 | ಡಾ. ಪುನೀತ್ ರಾಜ್‌ಕುಮಾರ್ | ಚಲನಚಿತ್ರ, ಸಮಾಜಸೇವೆ | 2022 |

10/12/2022

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.